Reg No B G 155 12-2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ.
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಆರಮುಸಿ ಪಿರಪ್ಪೀದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರಾಜದಲ್ಲಿ ಅತಿವಷ್ಟಿ ಪರಿಹಾರಕ್ಕೆ ಕೇಂದ್ರದ ನೆರವು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು-ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಮೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರಪೂರ್ವಕವಾಗಿ ಸಂದಾಯ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಕೇಂದ್ರದ ನೆರವು

ಬೆಂಗಳೂರು— ರಾಜ್ಯದಲ್ಲಿ ಅತಿವೃಷ್ಟಿ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ಕಾಗಿ ಕೇಂದ್ರವು ಮತ್ತೆ ರೂ. 3 ಕೋಟಿ ಕೊಟ್ಟಿದೆ – ಇದೂ ಸೇರಿ ರಾಜ್ಯಕ್ಕೆ ಕೇಂದ್ರದಿಂದ ದೊರೆತಿರುವ ಗ್ರಾಂಟು ಮತ್ತು ಸಾಲಗಳು ಒಟ್ಟು ರೂ. 8.13 ಕೋಟಿ ಆಗಿದೆ.

ಬೊಂಬಾಯಿ

ಬೊಂಬಾಯಿ— ನಾಲ್ಕು ದಿನಗಳಿಂದ ದಾಂಧಲೆಗೆ ತುತ್ತಾಗಿದ್ದ ಬೊಂಬಾಯು ನಿಧಾನ ಸಾಧಾರಣ ಸ್ಥಿತಿಗೆ ಬರುವುದು ಕಂಡುಬಂದಿತು – 9 ಕಡೆಗಳಲ್ಲಿ ಹಿಂಸಾತ್ಮಕ ಆಸ್ತಿಪಾಸ್ತಿ ನಷ್ಟಕ್ಕೆ ತೊಡಗಿದ್ದ ಗುಂಪಿನ ಮೇಲೆ ಗುಂಡುಹಾರಿಸಲಾಯಿತು – ಉತ್ತರ ಬೊಂಬಾಯಿದಲ್ಲಿ ಒಂದು ಜರಿ ಕಾರ್ಖಾನೆ ಮತ್ತು ಗಾಜಿನ ಕಾರ್ಖಾನೆ ಸುಡಲ್ಪಟ್ಟವು – ಕಾಮಾಟಿಪುರ ಮತ್ತು ದಾದರ್ ನಲ್ಲಿಯ ಪ್ಲಾಜಾ ಸಿನಿಮಾ ಹತ್ತಿರ ಅಂಗಡಿಗಳನ್ನು ಲೂಟಿ ಮಾಡುತ್ತಿದ್ದವರನ್ನು ಚದುರಿಸಲು ಗುಂಡುಹಾರಿಸಲಾಯಿತು – ಚುನಾಬತ್ತಿ ರೈಲ್ವೇ ಸ್ಟೇಷನ್ನಿಗೆ ಬೆಂಕಿ ಹತ್ತಿಸಲಾಯಿತು – ಭುಲೇಶ್ವರ ರಸ್ತೆಯಲ್ಲಿ ಎರಡು ಖಾಸಗಿ ಕಾರುಗಳು ಸುಡಲ್ಪಟ್ಟವು – ಮುಖ್ಯ ಮಂತ್ರಿ ಶ್ರೀ ನಾಯಿಕರು ಉತ್ತರ ಬೊಂಬಾಯಿನ ಗಲಭೆ ಭಾಗಗಳನ್ನೆಲ್ಲ ವಿಮಾನದಿಂದ ಈಕ್ಷಿಸಿದರು.

★

ಪಾರ್ಲಿಮೆಂಟು ಸೂಸ್ಯರೊಡನೆ

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು ಪಾರ್ಲಿಮೆಂಟಿನಲ್ಲಿರುವ ರಾಜ್ಯದ ಸದಸ್ಯರುಗಳಿಗೆ ರಾಜ್ಯದ ವಿವಿಧ ಸಮಸ್ಯೆಗಳನ್ನು ಪರಿಚಯ ಮಾಡಿ, ಇವುಗಳ ಪರಿಹಾರಕ್ಕೆ ಅವರು ದೆಲ್ಲಿ ಕಾರ್ಯನಡೆಸಬೇಕೆಂದು ವನಂತಿಸಿದರು – ಮಹಾಜನ ಸಮಿತಿ ವರದಿ, ಕೃಷ್ಣಾ–ಗೋದಾವರಿ ನೀರಿನ ವ್ಯಾಜ್ಯವೂ ಮುಖ್ಯ ವಿಚಾರಗಳಾಗಿದ್ದವು.

●

ಚುನಾವಣೆಗಳು

ಕಲ್ಕತ್ತಾ— ಪಶ್ಚಿಮ ಬಂಗಾಳಾ ಚುನಾವಣೆಯಲ್ಲಿ ನಿನ್ನೆವರೆಗೆ ಪ್ರಕಟವಾದ ಫಲಿತಾಂಶಗಳಲ್ಲಿ, ಕಾಂಗ್ರೆಸ್ ಸ್ಥಿತಿ ಆಕಾಜನಕವಾಗಿಲ್ಲ : ಸಂಯುಕ್ತರಂಗ ಉತ್ತಮವಾಗಿದೆ.

●

ಹೀನಕೃತ್ಯ

ಗುಲ್ಬರ್ಗ— ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯೊಡನೆ ಶಂಕರ ಎಂಬ ಹರಿಜನ ಯುವಕನು ಬಿರುಸಾಗಿ ಮಾತುಕತೆ ನಡೆಸಿ, ಕಚೇರಿಯನ್ನು ಕೆಡಿಸಿ, ಅವರ ಮೇಲೆ ಹೇಸಿಗೆ ಎಸೆದ ಆರೋಪಕ್ಕಾಗಿ ಬಂಧಿಸಲ್ಪಟ್ಟಿರುವನು: ತನಿಗೆ ನಡೆಯುತ್ತಿದೆ.

○

ನಗರದ ಶುಚಿತ್ವ

ಮೈಸೂರು— ಪೌರಸಭಾಧ್ಯಕ್ಷ ಶ್ರೀ ತಿಮ್ಮಯ್ಯನವರು ಸೋಮವಾರ "ಡೆಬ್ರಿಸ್ ಕ್ಲಿಯರೆನ್ಸ್ ಡ್ರೈವ್" ಉದ್ಘಾಟಿಸುತ್ತಾ, ನಗರವನ್ನು ಚೊಕ್ಕಟವಾಗಿಡಲು ಇಂತಹ ಕಾರ್ಯಗಳು ಅವಶ್ಯಕವೆಂದು ಹೇಳಿದರು.

★

ಜವಣರ ಹೇಳಿಕೆ

ನವದೆಹಲಿ— ಬೊಂಬಾಯಿನ ಭೀಕರ ಪರಿಸ್ಥಿತಿಗೆ ಮಹಾಜನ ಕಮಿಷನ್ ವರದಿಯನ್ನು ಕೇಂದ್ರವು ಜಾರಿಗೆ ತರದೇ ಇರುವದೇ ಕಾರಣವಾಗಿರುವದರಿಂದ, ಆ ಬಗ್ಗೆ ಸರಕಾರವು ನಿರ್ಧಾರ ಯಾವಾಗ ಆಗುವುದೆಂದು ಬಾತ್ಮೀದಾರರೊಬ್ಬರು ಗೃಹ ಮಂತ್ರಿ ಚವಣರನ್ನು ಕೇಳಿದ್ದಕ್ಕೆ, ಈ ಪ್ರಶ್ನೆ ಸರಕಾರದ ಸಂತ್ಯಾಲೋಚನೆಯಲ್ಲಿ ಇದೆಯೆಂದೂ, ಅದಕ್ಕೆ ತನ್ನ ಕಷ್ಟಗಳೂ ಇವೆಯೆಂದೂ, ಯಾವ ಸಮಸ್ಯೆ ಪರಿಹಾರಕ್ಕೂ ಈ ರೀತಿ ಪರ್ತಿಸಬಾರದೆಂದೂ ಅವರು ಉತ್ತರ ಕೊಟ್ಟರು.

○

ಕುಡಿಯೋಕ್ಕೆ ನೀರಿಲ್ಲ

ಹಾಸನ— ಈ ತಾಲ್ಲೂಕಿನ 4000 ಗ್ರಾಮಗಳ ಪೈಕಿ 300 ರಲ್ಲಿ ಕುಡಿಯುವ ನೀರಿನ ಅಭಾವವಿದೆಯೆಂದೂ, ಕೆರೆಗಳೆಲ್ಲಾ ಒಣಗಿಹೋಗಿವೆಯೆಂದೂ, ದನಗಳಿಗೆ ನೀರೂ ಮೇವೂ ಇಲ್ಲವೆಂದೂ ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷರು ಹೇಳಿದರು.

ಇದು ನಡೆದೀತೆ

ಮದರಾಸು— ಕೇಂದ್ರವು, ಕೂಡಲೇ ಮತ್ತು ಸ್ಪಷ್ಟವಾಗಿ, ಇಂಗ್ಲೀಷು ಕೊಂಡಿ ಭಾಷೆಯಾಗಿಯೂ, ಅಖಿಲ ಭಾರತದ ಅಧಿಕೃತ ಭಾಷೆಯಾಗಿಯೂ ಇರುವುದೆಂದು ಘೋಷಿಸಿದರೆ, ಕೇಂದ್ರ ಮತ್ತು ತಮಿಳು ನಾಡುವಿನಲ್ಲಿ ನಿಷ್ಕಳಂಕ ಪ್ರೇಮ ಮತ್ತು ಬಾಂಧವ್ಯ ಶಾಸ್ವತವಾಗಿರುವುದೆಂದು ಶ್ರೀ ರಾಜಗೋಪಾಲಾಚಾರಿಯವರು ಸ್ವರಾಜ್ಯ ಪತ್ರಿಕೆಯಲ್ಲಿ ಬರೆದಿರುವರು.

ಬಸ್ ಅಕಸ್ಮಿಕ

ಹಾಸನ— ಬೆಂಗಳೂರಿಗೆ ಹೊರಟಿದ್ದ ವೇಗದ ಸರ್ಕಾರಿ ಬಸ್ಸು ಬೆಳೂರು ಹತ್ತಿರ ಮರಕ್ಕೆ ಬಡಿದು 45 ಮಂದಿ ಪ್ರಯಾಣಿಕರು ಗಾಯಗೊಂಡರು.

ಪ್ರತಿಬಂಧಕಾಜ್ಞೆ

ಬೆಳಗಾಂನಲ್ಲಿ ಒಂದು ವಾರ ಸಭೆ, ಮೆರವಣಿಗೆ ಪ್ರತಿಬಂಧಿಸಲಾಗಿದೆ.

ಚಂಡೀಘರ್— ಪಂಜಾಬಿನ ಚುನಾವಣೆಯಲ್ಲಿ ಅಕಾಲಿ–ಜನಸಂಘ ಮೈತ್ರಿ ಶಾಸನ ಸಭೆಯಲ್ಲಿ ಮೆಜಾರಿಟಿ ಪಡೆದಿದೆ.

ಲಕ್ನೋ— ಉತ್ತರ ಪ್ರದೇಶ ಚುನಾವಣೆಯಲ್ಲಿ ಕಾಂಗ್ರೆಸ್ ಮೆಜಾರಿಟಿ ಪಡೆಯುವ ಸ್ಥಿತಿಯಲ್ಲಿದೆ.

ಪಾಟ್ನಾ— ಬೀಹಾರು ಶಾಸನ ಸಭೆಯಲ್ಲಿ ಕಾಂಗ್ರೆಸ್ ಮೆಜಾರಿಟಿ ಪಡೆಯುವ ಸಂಭವ ಕಡಮೆಯಾಗಿದೆ – ನಿನ್ನೆವರೆಗೆ 49 ಸ್ಥಾನಗಳು ಸಿಕ್ಕಿವೆ.

ಹೆಚ್ಚು ಆಹಾರಧಾನ್ಯ ಶೇಖರಣೆ

ಮಂಗಳೂರು—ಹೆಚ್ಚು ಆಹಾರಧಾನ್ಯ ಶೇಖರಿಸುವಂತೆ, ಆಹಾರಾಧಿಕಾರಿಗಳ ಸಭೆಯಲ್ಲಿ ಆಹಾರಮಂತ್ರಿ ಶ್ರೀ ವಿಠಲದಾಸ್ ಶೆಟ್ಟರು ತಿಳಿಸಿದರು.

(2)

ಭಾರತದ ನೌಕಾ

1973-64 ಸಾಲಿಗೆ ಭಾಸತವು 4.5 ದಶಲಕ್ಷ ಜಿಆರ್‌ಟಿ ಭಾರದಷ್ಟು ನೌಕೆಗಳನ್ನು ಹೊಂದಲು ಭಾರತವು ಯೋಜಿಸುತ್ತಿದೆ ಎಂದು ಸಲಹಾ ಸಮಿತಿಗೆ ತಿಳಿಸಲಾಗಿದೆ.

ಈರುಳ್ಳಿ ಮುಖಾತ್ಕೆ

ನ್ಯೂಕ್ಯಾಸಲ್ (ಇಂಗ್ಲೆಂಡ್) - ಬೇಯಿಸಿದ ಆಥವಾ ಹುರಿದ ಈರುಳ್ಳಿಯ ಶರೀರದೊಳಗೆ ಕಟ್ಟುವ ಗಾಳ್ಲಿಗಳನ್ನು ತೆರಗಿಸಲು ರಕ್ತದಲ್ಲಿನ ಶಕ್ತಿಯನ್ನು ಹೆಚ್ಚಿಸುವುದೆಂದೂ ಕ್ಯಾರೋನರಿ ಥ್ರೊಂಬಾಸಿಸ್‌ನ್ನು ಗುಣಪಡಿಸಲು ಸಾಧಕವಾಗುವುದೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

*

ಸೀರೆಯ ಸೌಂದರ್ಯ

ನವದೆಹಲಿ— ಭಾರತ ಮಹಿಳೆಯರಿಗೆ ಸೀರೆಯು ಸೌಂದರ್ಯದಾಯಕವಾಗಿದೆಯೆಂದೂ, ಭಾರತ ಮತ್ತು ರಷ್ಯಾ ಮಹಿಳೆಯರು ತಮ್ಮ ಸಾಂಪ್ರದಾಯಕ ಉಡುಪನ್ನು "ತುಂಡು ಉಡುಪು" ಗಳಿಗೆ ಬದಲಾಯಿಸಿಕೊಂಡಿಲ್ಲದಿರುವುದು ಸಂತೋಷಪ್ರದವೆಂದೂ ವಿಶ್ವದಾದ್ಯಂತ 'ತುಂಡು ಉಡುಪು" ಉಪಯೋಗಿಸುತ್ತಿರುವವರು ತಮ್ಮ ಸಾಂಪ್ರದಾಯಕ ಉಡುಪಿಗೆ ಬದಲಾಯಿಸಿಕೊಳ್ಳಬೇಕೆಂದೂ; ರಷ್ಯಾದ ಸಾಂಸ್ಕೃತಿಕ ನಿಯೋಗದ ನಾಯಕಿ ಶ್ರೀಮತಿ ನೀನಾ ಹೇಳಿದರು.

Protect the Cow

Help The Gorakshana

SHAKTI SUDHA

A Superb Tonic

ಆಶೋಕ ಪಬ್ಲಿಸಿಟಿ

ಲಾಸ್ಟಡ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯಸ್ಕಾಂತ ಔಷಧಗಳನ್ನೂ ದೊರೆಯುವ ಸ್ಥಳ

ವುಡ್‌ಲ್ಯಾಂಡ್ಸ್ 7-2-69 ರಿಂದ

.... ಮನಮೋಹಕ ಹಿಂದಿ ಚಿತ್ರ ....

ದಿವಾನ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯಕಾಣಿ ಸೈರಾಬಾನು ಅಭಿನಯದ

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಮಹೇಶ್ ಕೌಲ್

[-ದಿನ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 3 ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is well known that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed Published by Dharmaprachara Niata M. S Krishna Rao (Proprietor) at the Satyavadi Press, Chamarajapuram, Mysore 4